
**UNIVERSITY OF MYSORE**

# FOUNDATION DAY CELEBRATION



**Shri R.N. Ravi**
Hon'ble Governor of Tamil Nadu

***will Preside and Deliver Foundation Day Lecture***

**Shri Yaduveer Krishnadatta Chamaraja Wadiyar**
Scion of Mysore Royal Family
Mysuru

***will be the Chief Guest***

**Prof. G. Hemantha Kumar**
Vice Chancellor
University of Mysore, Mysuru

***will be Present***

*Syndicate and Academic Council members and all are cordially invited*

**Date : 27.07.2022, Wednesday** **Time : 11.00 am**

***Venue :*** **Crawford Hall, University of Mysore, Mysuru**

**Prof. R. Shivappa**
**Registrar**

ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಜಿಎಲ್13/110/2022-23

ದಿನಾಂಕ 21-07-2022

**ಸುತ್ತೋಲೆ**

ವಿಷಯ: "ಸಂಸ್ಥಾಪನಾ ದಿನಾಚರಣೆ" ಸಮಾರಂಭವನ್ನು ಆಚರಿಸುವ ಬಗ್ಗೆ
ಉಲ್ಲೇಖ: ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಟಿಪ್ಪಣಿ
ಸಂಖ್ಯೆ: ಕುಪ/ಇತರೆ/2022-23, ದಿನಾಂಕ: 19-07-2022.

-:-

ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ 27.07.2022ರಂದು ಬೆಳಗ್ಗೆ 11.00 ಗಂಟೆಗೆ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ "ಸಂಸ್ಥಾಪನಾ ದಿನಾಚರಣೆ" ಸಮಾರಂಭವನ್ನು ಏರ್ಪಡಿಸಲಾಗಿದೆ. ಈ ಸಮಾರಂಭಕ್ಕೆ ಆಗಮಿಸುತ್ತಿರುವ ಶ್ರೀ. ಆರ್. ಎನ್. ರವಿ, ಗೌರವಾನ್ವಿತ ರಾಜ್ಯಪಾಲರು, ತಮಿಳುನಾಡು ಇವರು ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಸಂಸ್ಥಾಪನಾ ದಿನಾಚರಣೆಯ ವಿಶೇಷ ಉಪನ್ಯಾಸವನ್ನು ನೀಡುವರು, ಶ್ರೀ. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜವಂಶಸ್ಥರು, ಮೈಸೂರು ಅರಮನೆ, ಮೈಸೂರು ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಮತ್ತು ಮಾನ್ಯ ಕುಲಪತಿಯವರಾದ ಪ್ರೊ.ಜಿ ಹೇಮಂತ ಕುಮಾರ್ ರವರು ಉಪಸ್ಥಿತರಿರುವರು.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಾಪಕರು/ಅಧ್ಯಾಪಕೇತರ ಉದ್ಯೋಗಿಗಳು/ಅತಿಥಿ ಉಪನ್ಯಾಸಕರು/ಸಂಶೋಧಕರು/ವಿದ್ಯಾರ್ಥಿಗಳು ದಿನಾಂಕ 27.07.2022 ರಂದು ಬೆಳಗ್ಗೆ 11.00 ಗಂಟೆಗೆ ಕಡ್ಡಾಯವಾಗಿ ಭಾಗವಹಿಸಬೇಕೆಂದು ತಿಳಿಸಿದೆ.

ಸದರಿ ಕಾರ್ಯಕ್ರಮ ಮುಗಿದ ನಂತರ ತಮ್ಮ ವಿಭಾಗ/ಕಛೇರಿ/ತರಗತಿಗಳಿಗೆ ಹಾಜರಾಗುವುದು.

ಕುಲಸಚಿವ

ಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ ನಿರ್ದೇಶಕರು/ಸಂಯೋಜನಾಧಿಕಾರಿಗಳು ಮತ್ತು ಪ್ರಾಧ್ಯಾಪಕರು, } ಈ ವಿಷಯವನ್ನು ತಮ್ಮ ವಿಭಾಗದ ಎಲ್ಲಾ ಅಧ್ಯಾಪಕರು/ ಅತಿಥಿ ಉಪನ್ಯಾಸಕರು ವಿದ್ಯಾರ್ಥಿಗಳು/ ಅಧ್ಯಾಪಕೇತರ ಉದ್ಯೋಗಿಗಳು/ ಸಂಶೋಧಕರುಗಳ ಗಮನಕ್ಕೆ ತರಬೇಕೆಂದು ತಿಳಿಸಿದೆ.
2. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು
3. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಹಾಸನ/ಮಂಡ್ಯ ಮತ್ತು ಚಾಮರಾಜನಗರ
5. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
6. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈವಿವಿ, ಮೈಸೂರು.
7. ಕಛೇರಿ ಪ್ರತಿ

ಮೈಸೂರು ಮಿತ್ರ

28-07-2022, ಗುರುವಾರ

# 'ಎನ್‌ಇಪಿ-2020' ಶಿಕ್ಷಣ ವ್ಯವಸ್ಥೆಯ ಬದಲಾವಣೆಯಲ್ಲ, ಉನ್ನತ ಪರಿವರ್ತನೆ

## ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅಭಿಮತ



ಮೈಸೂರು,ಜು.27(ಪಿಎಂ):- ದೇಶದ ಪ್ರಜೆಗಳು ಸರಿಯಾದ ಜ್ಞಾನ, ಸೂಕ್ತ ಕೌಶಲ್ಯ ಹೊಂದುವುದು ದೇಶದ ಬೆಳವಣಿಗೆಗೆ ನೇರ ಸಂಬಂಧ ಹೊಂದಿದೆ. ಈ ನಿಟ್ಟಿನಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 (ಎನ್‌ಇಪಿ) ಪ್ರಮುಖ ಪಾತ್ರ ವಹಿಸಲಿದ್ದು, 'ಎನ್‌ಇಪಿ-2020' ಶಿಕ್ಷಣ ವ್ಯವಸ್ಥೆಯ ಬದಲಾವಣೆಯಲ್ಲ. ಬದಲಿಗೆ ಅದು ಉನ್ನತ ಪರಿವರ್ತನೆ ಎಂದು ನಿವೃತ್ತ ಐಪಿಎಸ್ ಅಧಿಕಾರಿಗಳೂ ಆದ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯನ್ನು ವಿವಿ ಸಂಸ್ಥಾಪಕರೂ ಆದ ಅಂದಿನ ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಚಿತ್ರಪಟಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ, ಅವರು ಮಾತನಾಡಿದರು.

ಭಾರತೀಯ ಜ್ಞಾನ ಪರಂಪರೆಯೊಂದಿಗೆ ಹೊರತಂದಿರುವ ಎನ್‌ಇಪಿ-2020 ನಮ್ಮ ಯುವ ಜನತೆಯಲ್ಲಿ ಆತ್ಮವಿಶ್ವಾಸ ಮೂಡಿಸಲಿದೆ. ಕಳೆದ 7 ದಶಕಗಳಿಂದ ಭಾರತದಲ್ಲಿ ಲಕ್ಷಾಂತರ ಮಂದಿ ಪದವೀಧರರಾಗಿ ಹೊರಹೊಮ್ಮಿದ್ದಾರೆ. ಅಂತೆಯೇ ಅದರಲ್ಲಿ ಸಾಕಷ್ಟು ಮಂದಿ ನಿರುದ್ಯೋಗ ಸಮಸ್ಯೆ ಎದುರಿಸಿದ್ದಾರೆ. ಉದ್ಯೋಗಕ್ಕಾಗಿಯೇ ಪದವಿ ಎಂಬ ಮನೋಭಾವ ಬಹುತೇಕ ಮಂದಿಯಲ್ಲಿದ್ದು, ಪಶ್ಚಿಮದಿಂದ (ಪಾಶ್ಚಿಮಾತ್ಯ) ಬರುವುದೆಲ್ಲವೂ ಶ್ರೇಷ್ಠ ಎಂಬುದನ್ನು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬಿಂಬಿಸಿರುವುದೇ ಇಂತಹ ಪರಿಸ್ಥಿತಿಗೆ ಕಾರಣ. ಹೀಗಾಗಿ ಮಕ್ಕಳು ಮತ್ತು ಯುವ ಜನತೆಯಲ್ಲಿ ಕೌಶಲ್ಯ ಬೆಳೆಸಿ ಉದ್ಯೋಗಕ್ಕೆ ಪೂರಕ ವಾತಾವರಣ ಕಲ್ಪಿಸುವ ಆಶಯದಿಂದ ಎನ್‌ಇಪಿ-2020 ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ನೂತನ ಎನ್‌ಇಪಿಯಲ್ಲಿ ಅಳವಡಿಸಲಾಗಿರುವ ಪಠ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ವೃದ್ಧಿಸುತ್ತದೆ. ಪಶ್ಚಿಮದ (ಪಾಶ್ಚಿಮಾತ್ಯ) ಜ್ಞಾನವು 'ಮಾನವನೇ ಸರ್ವೋಚ್ಚ' ಎಂಬುದನ್ನು ಕೇಂದ್ರೀಕರಿಸಿದರೆ, ನಮ್ಮ ಭಾರತೀಯ ಸಂಸ್ಕೃತಿ 'ಮಾನವೀಯ ಮೌಲ್ಯ'ದ ಮಹತ್ವದ ಮೇಲೆ ಬೆಳಕು ಚೆಲ್ಲುತ್ತದೆ. ಮನುಷ್ಯ ಸಂಘ ಜೀವಿ. ಎಲ್ಲಾ ಜೀವಿಗಳ ಜೊತೆ ಹೊಂದಿಕೊಂಡು ಬದುಕಬೇಕು. ಪ್ರಕೃತಿಯನ್ನು ಗೌರವಿಸಿ, ಆರಾಧಿಸಬೇಕು ಎಂಬ ಭಾರತೀಯ ಪರಂಪರೆಯಲ್ಲಿ ಹುದುಗಿರುವ ಮೌಲ್ಯಗಳನ್ನು ನೂತನ ಎನ್‌ಇಪಿ ಒಳಗೊಂಡಿದೆ. ಈ ನಿಟ್ಟಿನಲ್ಲಿ ನೂತನ ಎನ್‌ಇಪಿ ಸಮರ್ಪಕ ಅನುಷ್ಠಾನ ಮುಖ್ಯವಾಗಿದ್ದು, ರಾಜ್ಯದಲ್ಲಿ ನೂತನ ಎನ್‌ಇಪಿ ಅನುಷ್ಠಾನಗೊಳಿಸುವಲ್ಲಿ ಮೈಸೂರು ವಿವಿ ಪ್ರಥಮ ಎಂಬುದು ಸಂತಸದ ವಿಷಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಹಂತ-ಹಂತವಾಗಿ ನಾನಾ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾ ತಮ್ಮ ಆಡಳಿತ ವಿಸ್ತರಿಸಿದರು. ಇದೇ ಸಮಯದಲ್ಲಿ ಅಮೆರಿಕಾವನ್ನು ವಸಾಹತುವನ್ನಾಗಿ ಮಾಡಿಕೊಂಡಿದ್ದ ಅವರಿಗೆ ಅಲ್ಲಿ ದೊಡ್ಡ ಮಟ್ಟದ ಕ್ರಾಂತಿ ಎದುರಾಯಿತು. ಈ ಕ್ರಾಂತಿಯು ಭಾರತದಲ್ಲಿ ಪ್ರಭಾವ ಉಂಟು ಮಾಡುವುದನ್ನು ತಪ್ಪಿಸಲು ಮುಂದಾದ ಬ್ರಿಟಿಷರು, ನಮ್ಮ ಪಾರಂಪರಿಕ ಶಿಕ್ಷಣ ಪದ್ಧತಿ ಹಾಳುಗೆಡವಿದರು. ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಲಷ್ಟೇ ಲಾಯಕ್ಕಾಗುವ ಶಿಕ್ಷಣವನ್ನು ದೇಶದ ಪ್ರಜೆಗಳಿಗೆ ಕಲ್ಪಿಸಿದರು. ಆ ಮೂಲಕ ಭಾರತದ ಆಚಾರ-ವಿಚಾರ, ಸಂಸ್ಕೃತಿ, ಕಲೆ, ಸಂಗೀತ, ರಾಜಕೀಯ ಚರಿತ್ರೆ ಸೇರಿದಂತೆ ಎಲ್ಲವನ್ನೂ ಯೂರೋಪ್‌ಮಯ ಮಾಡಿ, ಪಶ್ಚಿಮದ್ದೆಲ್ಲವೂ ಶ್ರೇಷ್ಠ ಎಂಬ ನಂಬಿಕೆ ಹುಟ್ಟಿಸಿದರು. ಈಗಲೂ ಆ ಪ್ರಭಾವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿದ್ದು, ನಮ್ಮ ಪಾರಂಪರಿಕ ಶಿಕ್ಷಣ ವ್ಯವಸ್ಥೆ ಕಡೆಗೆ ಪರಿವರ್ತನೆ ಹೊಂದುವ ಸಮಯ ಈಗ ಬಂದಿದೆ ಎಂದು ಹೇಳಿದರು.

ಒಮ್ಮೆ ಬ್ರಿಟಿಷ್ ಸಾಮ್ರಾಜ್ಯದಿಂದ ಮದ್ರಾಸ್ ಬಂದರಿಗೆ ಹಡಗಿನ ಮೂಲಕ ಸಾವಿರಾರು ಟನ್ ಕಬ್ಬಿಣ ಬಂತು. ಆದರೆ ಇದನ್ನು ಖರೀದಿಸಲು ಯಾರೂ ಮುಂದೆ ಬರಲಿಲ್ಲ. ಇದಕ್ಕೆ ಕಾರಣ ಭಾರತದಲ್ಲಿ ಗುಡಿ ಕೈಗಾರಿಕೆಗಳು ಬಹಳ ಸದೃಢವಾಗಿದ್ದವು. ತಮಗೆ ಅಗತ್ಯವಿರುವ ವಸ್ತುಗಳನ್ನು ಸ್ಥಳೀಯವಾಗಿಯೇ ಉತ್ಪಾದನೆ ಮಾಡಿಕೊಳ್ಳುವ ಕೌಶಲ್ಯ ಹೊಂದಿದ್ದರು. ಹಾಗಾಗಿ ಈ ಕಬ್ಬಿಣ ಖರೀದಿಗೆ ಯಾರೂ ಮುಂದೆ ಬರಲಿಲ್ಲ. ಇದನ್ನು ಮನಗಂಡ ಬ್ರಿಟಿಷರು ತಮ್ಮ ವ್ಯಾಪಾರಕ್ಕೆ ಪೂರಕವಾಗಿ ಕೈಗಾರಿಕ ಕೇಂದ್ರೀಕೃತ ವ್ಯವಸ್ಥೆ ತಂದರು. ಆ ಮೂಲಕ ನಮ್ಮ ದೇಶದ ಗುಡಿ ಕೈಗಾರಿಕೆಗಳ ಪರಂಪರೆಗೆ ಹಿನ್ನಡೆ ಉಂಟಾಗುವಂತೆ ಮಾಡಿದರು. ಹೀಗಾಗಿ ನಮ್ಮ ಕೌಶಲ್ಯ ಪರಂಪರೆಯ ಪುನರುಜ್ಜೀವನಗೊಳಿಸಿ, ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮುನ್ನುಡಿ ಬರೆಯಲಿದೆ ಎಂದು ಪ್ರತಿಪಾದಿಸಿದರು.

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅತಿಥಿಯಾಗಿ ಪಾಲ್ಗೊಂಡಿದ್ದರು. ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಆಡಳಿತಾಂಗ ಕುಲಸಚಿವ ಪ್ರೊ.ಆರ್.ಶಿವಪ್ಪ ಸೇರಿದಂತೆ ವಿವಿಯ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿಗ-

### ಮುಮ್ಮಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ 'ರಾಜಾ ಫ್ರೀ ಸ್ಕೂಲ್' ಮೈಸೂರು ವಿವಿ ಸ್ಥಾಪನೆಗೆ ಪ್ರೇರಣೆ

ಮುಮ್ಮಡಿ ಕೃಷ್ಣರಾಜ ಒಡೆಯರ್ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ಕಲ್ಪಿಸಲು ಸ್ಥಾಪಿಸಿದ ರಾಜಾ ಫ್ರೀ ಸ್ಕೂಲ್, ಮುಂದೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರು ವಿವಿ ಸ್ಥಾಪನೆಗೆ ಪ್ರೇರಣೆಯಾಯಿತು ಎಂದು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರು ವಿವಿ ಸಂಸ್ಥಾಪನಾ ದಿನದ ಸ್ಮರಣೆ ವೇಳೆ ವಿವಿ ಸ್ಥಾಪನೆಗೆ ಪೂರಕವಾದ ಘಟನೆಗಳನ್ನು ನೆನೆಯಬೇಕು. ನಾಲ್ವಡಿ ಅವರ ತಾತಾ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು 'ರಾಜಾ ಫ್ರೀ ಸ್ಕೂಲ್' ಸ್ಥಾಪಿಸಿದರು. ಅದು ಮುಂದೆ ಮೈಸೂರು ವಿವಿ ಸ್ಥಾಪನೆಗೆ ಪ್ರೇರಣೆಯಾಯಿತು. ಆರ್ಥಿಕವಾಗಿ ಹಿಂದುಳಿದವರಿಗೆ ಈ ರಾಜಾ ಫ್ರೀ ಸ್ಕೂಲ್‌ನಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಿದ್ದರು. ಅದು ಬೆಳೆದು 10ನೇ ಚಾಮರಾಜ ಒಡೆಯರ್ ಕಾಲದಲ್ಲಿ ಹೆಚ್ಚು ವಿಸ್ತರಿಸಿತು ಎಂದು ತಿಳಿಸಿದರು. ನಂತರ ನಾಲ್ವಡಿಯವರ ಕಾಲದಲ್ಲಿ ಮೈಸೂರಿಗರು ಉನ್ನತ ಶಿಕ್ಷಣ ಪಡೆಯಲು ಮದ್ರಾಸ್‌ಗೆ ಹೋಗಬೇಕಾದ ಪರಿಸ್ಥಿತಿ ಇತ್ತು. ನಮ್ಮ ರಾಜ್ಯದಲ್ಲೇ ಉನ್ನತ ಶಿಕ್ಷಣವನ್ನೂ ಪಡೆಯಲಿ ಎಂಬ ಕಾರಣಕ್ಕೆ ಮೈಸೂರು ವಿವಿ ಸ್ಥಾಪನೆ ಮಾಡಲಾಯಿತು. ಎಲ್ಲದರಲ್ಲೂ ಮೊದಲು ಎನ್ನುವ ಹೆಗ್ಗಳಿಕೆ ಹೊಂದಿರುವ ಮೈವಿವಿ, ಅದನ್ನು ಮುಂದುವರಿಸಿಕೊಂಡು ಹೋಗಲಿ ಎಂದು ಆಶಿಸಿದರು.

### ಮೈಸೂರು ವಿವಿಗೆ ರಾಷ್ಟ್ರೀಯ ವಿವಿ ಸ್ಥಾನ ಪ್ರಾಪ್ತವಾಗಲಿ

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ವಿವಿ ಸ್ಥಾಪಿಸಿ ಇಂದಿಗೆ 106 ವರ್ಷಗಳು ಕಳೆದಿವೆ. ಅವರು ನಾಡಿನ ಏಳಿಗೆಗಾಗಿ ದುಡಿದ ಶ್ರೇಷ್ಠ ದೊರೆ ಎಂದು ಸ್ಮರಿಸಿದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಮೈಸೂರು ವಿವಿಗೆ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಸ್ಥಾನ ಆದಷ್ಟು ಶೀಘ್ರದಲ್ಲಿ ಪ್ರಾಪ್ತವಾಗಲಿ ಎಂದು ಆಶಿಸುವುದಾಗಿ ತಿಳಿಸಿದರು. ನಾಲ್ವಡಿ ಅವರನ್ನು ಮಹಾತ್ಮ ಗಾಂಧಿಯವರು 'ರಾಜರ್ಷಿ' ಎಂದು ಬಣ್ಣಿಸಿದ್ದಾರೆ. ನಾಲ್ವಡಿಯವರು ಇಟ್ಟ ಒಂದೊಂದು ಹೆಜ್ಜೆಯೂ ನಾಡಿನ ಪ್ರಗತಿಯ ಮೈಲುಗಲ್ಲು. ಅವರು 1916ರ ಜು.27ರಂದು ಮೈಸೂರು ವಿವಿ ಅಸ್ತಿತ್ವಕ್ಕೆ ತಂದರು ಎಂದು ಹೇಳಿದರು. ಮದ್ರಾಸ್ ವಿವಿ ಒಪ್ಪಿದರೆ ಮಾತ್ರವೇ ಮೈಸೂರು ವಿವಿ ಅಸ್ತಿತ್ವಕ್ಕೆ ಬರಬಹುದು ಎಂಬ ಷರತ್ತು ವಿಧಿಸಿದ್ದ ಸಂದರ್ಭ ಅದು. ಊಟಿಯಲ್ಲಿ ಜರುಗಿದ ಮದ್ರಾಸ್ ವಿವಿ ಸಿಂಡಿಕೇಟ್ ಸಭೆಯಲ್ಲಿ ಸದಸ್ಯರು, ಮೈಸೂರು ವಿವಿ ಸ್ಥಾಪನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ವೇಳೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರ ಮನವೊಲಿಸುವಲ್ಲಿ ಸಫಲರಾದರು. 1916 ಅ.12ರಂದು ನಾಲ್ವಡಿಯವರು ಮೈಸೂರು ವಿವಿಯ ಮೊದಲ ಸೆನೆಟ್ ಸಭೆ ಉದ್ದೇಶಿಸಿ ಭಾಷಣ ಮಾಡಿದರು. ಸಣ್ಣ ತೊರೆಯಾಗಿ ಉದ್ಭವವಾದ ನಮ್ಮ ಮೈಸೂರು ವಿವಿ, ದಶಕಗಳು ಉರುಳಿದಂತೆ ಹಿಗ್ಗುತ್ತ ಇಂದು ವಿಶಾಲವಾದ ನದಿಯಾಗಿ ಹರಿಯುತ್ತಿದೆ. ಈ ಪ್ರಗತಿಗೆ ಕಾರಣರಾದ ಎಲ್ಲಾ ಹಿರಿಯರು ಮತ್ತು ಶಿಕ್ಷಣ ತಜ್ಞರನ್ನು ಅತ್ಯಂತ ಗೌರವದಿಂದ ನೆನೆಯುತ್ತೇನೆ ಎಂದರು.

Deccan Herald

28-07-2022, Thursday



Tamil Nadu Governor R N Ravi paid floral tributes to the portrait of Nalwadi Krisharaja Wadiyar at the Foundation Day celebration of University of Mysore (UoM) at Crawford Hall in Mysuru on Wednesday. Scion of the erstwhile royal family Yaduveer Krishnadatta Chamaraja Wadiyar and UoM Vice-Chancellor G Hemantha Kumar are seen. DH PHOTO

# NEP will reform Indian edu system: TN governor

## 'System of awarding only degrees is a folly of the British'

MYSURU, DHNS

Tamil Nadu Governor R N Ravi advocated that the National Education Policy (NEP) 2020 would be instrumental in reforming the education system, that was meddled by the British.

Ravi was delivering the University of Mysore (UoM) Foundation Day lecture at Crawford Hall in the city on Wednesday.

"NEP will not just bring in some changes, but it will also ensure improvement. The curriculum, implemented now, will increase the confidence of the students. It will stabilise our basic system. NEP combines skill, knowledge and science. NEP will revive the education system of Indian heritage," he opined.

The governor said that the universities had produced lakhs of graduates in India.

"But, there are also unemployed people to the same extent. The system of awarding only degrees is a folly of the British. Many graduates are job seekers and not job givers. The NEP is being implemented in this regard," the VC added.

"As per the Western culture, 'man is supreme'. But, Indian culture teaches that humanity is superior. It teaches to respect all life and nature. All these matters are included in the NEP," he said.

Taking severe exception to Britishers, Ravi said, "The British, who came to India for trade, conquered our territories in a phased manner. Ruled us. They wanted to destroy the Indian education system, to destroy India. Thus, they devised their own strategy. Britishers offered education to those, who were in favour of their administration. They managed to shut all cottage industries".

"The British converted Indian customs, ideas, culture, art, music, politics and history, into European. They made us believe that everything that came from the West was superior. We have to come out of that influence on education and go back to our traditional education system," he said.

Scion of the erstwhile royal family Yaduveer Krishnadatta Chamaraja Wadiyar said it was high time to recall history. Mummadi Krishnaraja Wadiyar sowed the seed for the varsity and Nalwadi Krishnaraja Wadiyar established it, to provide education for all, he said.

UoM Vice-Chancellor G Hemantha Kumar was present.

The New Indian Express
28-07-2022, Thursday

# 'Need for spiritual evolution with intellectual growth'

EXPRESS NEWS SERVICE @Mysuru

STATING that the epistemology and system of knowledge of India is different from the western countries, Tamil Nadu Governor R N Ravi said there is a need for spiritual evolution along with intellectual supremacy to make India great.

Speaking during the Foundation Day celebration of the century-old University of Mysore (UoM) here on Wednesday, Ravi said unlike European countries or the western world, intellect knowledge is not supreme in India. "In Indian system, intellect is not sovereign and there is also a spiritual evolution. The Indian system of knowledge gives due importance to intellectual growth and also a space for spiritual growth. India needs to be militarily strong, materially prosperous, intellectually superior and also spiritually evolved to take the leadership of the world," he said.



Tamil Nadu governor R N Ravi and UoM VC Prof G Hemanth Kumar at UoM's Foundation Day celebration in Mysuru on Wednesday | EXPRESS

Stating that British, during their rule in India, tried to divide the people, the TN governor said: "They started a new discipline called anthropology just to segregate people. They used to objectify people and even today we have people of British legacy who say we belong to that race."

He heaped praise on the National Education Policy and said it must be looked in a broader perspective and be implemented.

ಕನ್ನಡಪ್ರಭ

28-07-2022, ಗುರುವಾರ

# ಎನ್‌ಇಪಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲಿ

## ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅಭಿಮತ | ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆ– ನಾಲ್ವಡಿ ಸ್ಮರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಉದ್ಯೋಗಕ್ಕೆ ಪದವಿ, ಪಶ್ಚಿಮದ್ದು ಶ್ರೇಷ್ಠ ಎಂಬ ಮನೋಭಾವವನ್ನು ರಾಷ್ಟ್ರೀಯ ಶಿಕ್ಷಣ ನೀತಿ ಬದಲಿಸಿ, ಸಾಕಷ್ಟು ಸುಧಾರಣೆ ತರಲಿದೆ ಎಂದು ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಬುಧವಾರ ನಡೆದ ವಿವಿಯ ಸಂಸ್ಥಾಪನಾ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜನರಲ್ಲಿ ಪಶ್ಚಿಮದಿಂದ ಬರುವುದೆಲ್ಲವೂ ಶ್ರೇಷ್ಠ ಎಂಬ ಮನೋಭಾವವಿದೆ. ಆದ್ದರಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಲಕ್ಷಾಂತರ ಮಂದಿ ಪ್ರತಿ ವರ್ಷ ಪದವೀಧರರಾಗುತ್ತಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ನಿರುದ್ಯೋಗಿಗಳು ಇದ್ದಾರೆ. ಆದ್ದರಿಂದ ಪದವಿ ಎಂಬುದು ಉದ್ಯೋಗಕ್ಕಾಗಿ ಅಲ್ಲ ಎಂಬ ಮನೋಭಾವ ಬದಲಾಗಬೇಕು ಎಂದರು.



ಮೈಸೂರಿನ ಕ್ರಾಫರ್ಡ್ ಹಾಲ್‌ನಲ್ಲಿ ಬುಧವಾರ ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ಇದ್ದಾರೆ.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಕೆಲಸವನ್ನು ರಾಷ್ಟ್ರೀಯ ಶಿಕ್ಷಣ ನೀತಿ ಪಠ್ಯಕ್ರಮ ಮಾಡುತ್ತದೆ. ಮೂಲಭೂತ ವ್ಯವಸ್ಥೆಯನ್ನು ಸುಸ್ಥಿರಗೊಳಿಸುತ್ತದೆ. ಸಮರ್ಪಕವಾದ ಕೌಶಲ, ಜ್ಞಾನ ಮತ್ತು ವಿಜ್ಞಾನದ ಟಿಸಿಲನ್ನು ಒಂದಕ್ಕೊಂದನ್ನು ಬೆಸೆಯುವ ಸಾಧನವಾಗಿ ಇದು ಕೆಲಸ ಮಾಡುತ್ತದೆ. ಭಾರತೀಯ ಪರಂಪರೆಯ ಶಿಕ್ಷಣ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸ ಕೆಲವನ್ನು ಈ ಶಿಕ್ಷಣ ನೀತಿ ಮಾಡುತ್ತದೆ ಎಂದು ಅವರು ಹೇಳಿದರು.

ಪಶ್ಚಿಮದ ಜ್ಞಾನವು ಮಾನವನೇ ಸರ್ವೋಚ್ಚ ಎಂದು ಹೇಳಿದರೆ, ಮಾನವೀಯತೆಯೇ ಶ್ರೇಷ್ಠ ಎಂದು ನಮ್ಮ ಸಂಸ್ಕೃತಿ ತಿಳಿಸುತ್ತದೆ. ಭೂಮಿಯಲ್ಲಿ ಇರುವ ಎಲ್ಲ ಸಕಲ ಜೀವರಾಶಿಗಳ ಜತೆ ಹೊಂದಾಣಿಕೆಯಿಂದ ಬದುಕಬೇಕು ಹಾಗೂ ಪ್ರಕೃತಿಯನ್ನು ಗೌರವಿಸಬೇಕು ಎನ್ನುವುದನ್ನು ಕಲಿಸಿಕೊಡುತ್ತದೆ. ಇದೆಲ್ಲವನ್ನೂ ರಾಷ್ಟ್ರೀಯ ಶಿಕ್ಷಣ ನೀತಿ ಒಳಗೊಂಡಿದೆ ಎಂದು ಅವರು ತಿಳಿಸಿದರು.

ಭಾರತಕ್ಕೆ ವ್ಯಾಪಾರಕ್ಕೆಂದು ಬಂದ ಬ್ರಿಟಿಷರು, ಹಂತ-ಹಂತವಾಗಿ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾ ಆಡಳಿತ ನಡೆಸಲು ಶುರು ಮಾಡಿದರು. ಇದೇ ಸಮಯದಲ್ಲಿ ಅವರು ಅಮೆರಿಕಾವನ್ನು ವಸಾಹತುವನ್ನಾಗಿ ಮಾಡಿಕೊಂಡಿದ್ದರು. ಅಲ್ಲಿ ಜನರಿಂದ ದೊಡ್ಡ ಮಟ್ಟದ ಕ್ರಾಂತಿ ನಡೆಯುತ್ತಿತ್ತು. ಈ ಕ್ರಾಂತಿಯು ಭಾರತದಲ್ಲಿ ಪ್ರಭಾವ ಬೀರುವುದನ್ನು ತಪ್ಪಿಸಲು ಬ್ರಿಟಿಷರು ನಮ್ಮ ಪಾರಂಪರಿಕ ಶಿಕ್ಷಣ ಪದ್ಧತಿಯನ್ನು ಹಾಳುಗೆಡವಿದರು. ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ಕಾರಕೂನರಾಗಿ ಕೆಲಸ ಮಾಡಲಷ್ಟೇ ಲಾಯಕ್ಕಾಗುವ ಮಟ್ಟದ ಶಿಕ್ಷಣವನ್ನು ಕಲಿಸಿದ್ದಾಗಿ ಅವರು ಟೀಕಿಸಿದರು.

ಹೊಸ ನೀತಿಯನ್ನು ಅಳವಡಿಸುವಾಗ ಟೀಕೆ ಟಿಪ್ಪಣಿಗಳು ಸಹಜ. ಶಿಕ್ಷಣ ಸಂಸ್ಥೆಗಳು, ಸಂಪನ್ಮೂಲ ವ್ಯಕ್ತಿಗಳು ಈ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಗತ್ಯವಿದೆ ಎಂದರು.

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಹಿಂದುಳಿದವರಿಗೆ ಶಿಕ್ಷಣ ಎಂಬ ಬೀಜವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ನೆಟ್ಟರು. ನಾಲ್ವಡಿಯವರು ಆ ಪರಂಪರೆ ಮುಂದುವರಿಸಿ ಮೈಸೂರು ವಿವಿಯನ್ನು ಸ್ಥಾಪನೆ ಮಾಡಿದರು. ಎಲ್ಲದರಲ್ಲೂ ಮೊದಲು ಎನ್ನುವ ಹೆಗ್ಗಳಿಕೆಯನ್ನು ಹೊಂದಿರುವ ಮೈಸೂರು ವಿವಿಯು ಅದನ್ನು ಮುಂದುವರಿಸಿಕೊಂಡು ಹೋಗಬೇಕು ಎಂದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ಇದ್ದರು.

ಆಂದೋಲನ

28-07-2022, ಗುರುವಾರ

# ಎನ್‌ಇಪಿ ಬದಲಾವಣೆಯಲ್ಲ, ಸುಧಾರಣೆ: ಆರ್.ಎನ್.ರವಿ

## ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ತ.ನಾಡು ರಾಜ್ಯಪಾಲರ ಅಭಿಪ್ರಾಯ

ಮೈಸೂರು: 'ರಾಷ್ಟ್ರೀಯ ಶಿಕ್ಷಣ ನೀತಿ-2020' ಶಿಕ್ಷಣ ವ್ಯವಸ್ಥೆಯಲ್ಲಿನ ಬದಲಾವಣೆ ಅಲ್ಲ, ಬದಲಾಗಿ ಸುಧಾರಣೆಯಾಗಿದೆ ಎಂದು ತಮಿಳುನಾಡಿನ ರಾಜ್ಯಪಾಲರಾದ ಆರ್.ಎನ್.ರವಿ ಅವರು ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಬುಧವಾರ ನಡೆದ ವಿಶ್ವವಿದ್ಯಾನಿಲಯ ಸಂಸ್ಥಾಪನಾ ದಿನಾಚರಣೆಯ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ 7 ದಶಕಗಳಿಂದ ಭಾರತದಲ್ಲಿ ಲಕ್ಷಾಂತರ ಜನರು ಪದವೀಧರರಾಗಿ ವಿಶ್ವವಿದ್ಯಾನಿಲಯಗಳಿಂದ ಹೊರಬಂದಿದ್ದಾರೆ. ಆದರೆ ಅಷ್ಟೇ ಪ್ರಮಾಣದಲ್ಲಿ ನಿರುದ್ಯೋಗಿಗಳು ಇದ್ದಾರೆ. ಉದ್ಯೋಗಕ್ಕಾಗಿಯೇ ಪದವಿ ಎನ್ನುವ ಮನೋಭಾವನೆ ಜನರ ಅಂತರ್ಯದಲ್ಲಿ ಹುದುಗಿದೆ. ಅಲ್ಲದೆ ಪಶ್ಚಿಮದಿಂದ ಬರುವುದೆಲ್ಲವೂ ಶ್ರೇಷ್ಠ ಎಂದು ಅದರ ಪ್ರಭಾವದ ಛಾಯೆಯೂ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇದೆ. ಆದ್ದರಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಅವರು ಹೇಳಿದರು.



ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅಳವಡಿಸಲಾಗಿರುವ ಪಠ್ಯಕ್ರಮ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಮೂಲಭೂತ ವ್ಯವಸ್ಥೆಯನ್ನು ಸುಸ್ಥಿರಗೊಳಿಸುತ್ತದೆ. ಸಮರ್ಪಕವಾದ ಕೌಶಲ, ಜ್ಞಾನ ಮತ್ತು ವಿಜ್ಞಾನದ ಟಿಸಿಲುಗಳನ್ನು ಒಂದಕ್ಕೊಂದನ್ನು ಬೆಸೆಯುವ ಸಾಧನವಾಗಿದೆ. ಅಲ್ಲದೆ ಭಾರತೀಯ ಪರಂಪರೆಯ ಶಿಕ್ಷಣ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುತ್ತದೆ ಎಂದು ಅವರು ವಿಶ್ಲೇಷಣೆ ಮಾಡಿದರು.

ಹೊಸ ನೀತಿ ಅಳವಡಿಸುವಾಗ ಟೀಕೆ ಟಿಪ್ಪಣಿಗಳು ಸಹಜ. ಶಿಕ್ಷಣ ಸಂಸ್ಥೆಗಳು, ಸಂಪನ್ಮೂಲ ವ್ಯಕ್ತಿಗಳು ಈ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಗತ್ಯವಿದೆ. ಮೈಸೂರು ವಿವಿಯು ಎನ್‌ಇಪಿಯನ್ನು ಅನುಷ್ಠಾನಗೊಳಿಸುತ್ತಿರುವ ಮೊದಲ ವಿವಿಯಾಗಿದ್ದು, ಈ ಕಾರ್ಯದಲ್ಲಿ ಅದು ಯಶಸ್ಸು ಕಾಣಲಿ ಎಂದು ತಿಳಿಸಿದರು.

ಹಿಂದುಳಿದವರಿಗೆ ಶಿಕ್ಷಣ ಎಂಬ ಬೀಜವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ನೆಟ್ಟರು. ನಾಲ್ವಡಿಯವರು ಆ ಪರಂಪರೆಯನ್ನು ಮುಂದುವರಿಸಿ ಮೈಸೂರು ವಿವಿಯನ್ನು ಸ್ಥಾಪನೆ ಮಾಡಿದರು. ಎಲ್ಲದರಲ್ಲೂ ಮೊದಲು ಎನ್ನುವ ಹೆಗ್ಗಳಿಕೆಯನ್ನು ಹೊಂದಿರುವ ಮೈಸೂರು ವಿವಿ ಅದನ್ನು ಮುಂದುವರಿಸಿಕೊಂಡು ಹೋಗಬೇಕು.

-ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್,
ರಾಜವಂಶಸ್ಥರು

ಸಣ್ಣ ತೊರೆಯಿಂದ ವಿಶಾಲ ನದಿಯೋಪಾದಿಯಾಗಿ ರೂಪುಗೊಂಡಿರುವ ಮೈಸೂರು ವಿವಿಯು ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಸ್ಥಾನಮಾನ ಹೊಂದಲು ಎಲ್ಲ ರೀತಿಯ ಅರ್ಹತೆಯನ್ನು ಪಡೆದಿದೆ. ಇದು ಬೇಗ ಸಾಕಾರಗೊಳ್ಳಲಿ ಎನ್ನುವುದು ನಮ್ಮ ಆಶಯ.

-ಪ್ರೊ.ಜಿ.ಹೇಮಂತಕುಮಾರ್,
ಕುಲಪತಿ, ಮೈಸೂರು ವಿವಿ

The Deccan Herald.

28-07-2021, Wednesday



S Ayyappan, chairman of Karnataka Science and Technology Academy and Chancellor of Central Agricultural University, is felicitated during the 105th Foundation Day of the University of Mysore in Mysuru on Tuesday. Registrar R Shivappa, retired professor C Naganna and Vice-Chancellor G Hemantha Kumar are seen. DH PHOTO

# Sudha Murty advocates entrepreneurship to create wealth

**MYSURU, DHNS:** Infosys Foundation founder Sudha Murty advocated entrepreneurship for creating wealth and to eradicate poverty.

She was delivering the 105th Foundation Day lecture of the University of Mysore (UoM) on 'What We Do Not Learn From Our Education System, But Is Very Essential For Our Life' on Tuesday.

"University education gives the confidence to face the challenges in life. Language, knowledge, logic and common sense acquired in the university will help one to overcome difficulties in career and life," she said.

"Everyone should work hard to make India a developed and rich nation. One should explore entrepreneurship. It creates and provides jobs. N R Narayana Murthy, also an alumnus of the UoM, ventured into entrepreneurship. Myself and Murthy had good jobs in Mumbai and we could have lived comfortably and happily. But, Murthy wanted to start Infosys as he wished to create wealth and jobs. My initial contribution to the company was Rs 10,000. Now it has grown into a behemoth," Sudha Murthy recalled.

She said that women should have an inclination towards finances' money management and investments.

"Women should not neglect money matters, putting the entire responsibility on parents or husbands. As Science and technology is expanding its horizons, opportunities for youth to fulfil their dreams are multiplying. Challenges will also be there. But, they are interesting," she said.

"Education incites new thoughts. Students should develop a positive attitude with foresight. Besides, students should develop sportsmanship spirit in education, career and life. Failures in sports increase the urge for victories. If one becomes too proud of victory, failure returns. Hence, students learn to take both failures and victories in the same spirit. Scientific temper is vital for success. One should become inquisitive and curious, to learn new things," Sudha Murty said.

She said that the foresight of the founder of UoM, Nalvadi Krishnaraja Wadiyar, the 24th maharaja of the Yadu dynasty, put erstwhile Mysuru and present Karnataka in the forefront as a model state.

"The UoM itself has played a vital role in moulding the character of Karnataka with its contribution to education, linguistics, literature and research," she added.